(ಶ್ರೀ ಎಚ್. ಡಿ. ದೇವೇಗೌಡ)

ಸ್ವಂತ ಖರ್ಚಿನಿಂದ ತರಪೇತು ಹೊಂದಿದವರಿಗೂ ಇಬ್ಬರಿಗೂ ಈ ರೆವೆನ್ಯೂ ಆಫ್ ಪೇ ಸ್ಕೇಲ್ ಅಪ್ಲೈ ಆಗುವುದಿಲ್ಲವೇ?

ಶ್ರೀ ಎಸ್. ಆರ್. ಕಂಠಿ.-ಅವರು ಸ್ವಲ್ಪ ಗೊಂದಲ ಮಾಡಿಕೊಂಡಿದ್ದಾರೆ.1-1-57ರ ಹಿಂದ ಇದ್ದವರು ಯಾರು ಸ್ವಂತ ಖರ್ಚಿನಿಂದ ತರಪೇತು ಹೊಂದಿದರೋ ಅವರೆಲ್ಲರಿಗೂ ಎರಡು ಇಂಕ್ರಿಮೆಂಟ್ ಸಿಕ್ಕಿದೆ. 1-1-57ರ ನಂತರ ಯಾರು ಟ್ರೈನಿಂಗ್ ಹೋದ್ದನ್ನೋ ಅವರಿಗೆ ಸರ್ಕಾರದವತ್ತೇ ಕಳುಹಿಸಿದರೆ ಸಿಕ್ಕುವುದಿಲ್ಲ ಎನ್ನುವುದರಲ್ಲಿ ತೊಂದರೆ ಇಲ್ಲ. ಅವರು ಹೇಳುವುದೇನೆಂದರೆ 1-1-57 ರಿಂದ ಸ್ವಂತ ಖರ್ಚಿನಲ್ಲಿ ಯಾರು ತರಪೇತು ಹೊಂದುತ್ತಾರೋ ಅವರಿಗೆ ಏಕೆ ಕೊಡುವುದಿಲ್ಲ ಎಂಬ ಪ್ರಶ್ನೆ ತಂದಿದ್ದಾರೆ. ಆಗಲೇ ಉತ್ತರ ಹೇಳಿದೆ 1-1-57ರನಂತರ ಈ ನಿಬಂಧನೆಯನ್ನು ಸೇರಿಸಿದ್ದೇವೆ. ಯಾರನ್ನು ತೆಗೆದುಕೊಳ್ಳುತ್ತೇವೆ ಅವರಿಗೆ ಟ್ರೈನಿಂಗ್ ಆದರೇ ತೆಗೆದುಕೊಳ್ಳಬೇಕೆಂದು ಕಂಡೀಷನ್ ಹಾಕಿದ್ದೇವೆ ಟ್ರೈನಿಂಗ್ ಆಗಿದ್ದರೆ ಅವರು ತಮ್ಮ ಸ್ವಂತ ಖರ್ಚಿನಲ್ಲಿ ಟ್ರೈನಿಂಗ್ ಮಾಡಿಕೊಳ್ಳಬೇಕು. ಇಲ್ಲದೇ ಇದ್ದರೆ ಯಾವ ಇಂಕ್ರಿಮೆಂಟು ಕೊಡುವುದಿಲ್ಲ.

ಶ್ರೀ ಸಿದ್ಧಯ್ಯ ಕಾಶೀಮಠ.—1956ಕ್ಕೆ ಹಿಂದೆ ತಮ್ಮ ಸ್ವಂತ ಖರ್ಚಿನಲ್ಲಿ ಟ್ರೈನಿಂಗ್ ಮಾಡಿಕೊಂಡು ಬಂದವರಿಗೆ ಮಾತ್ರ ಎರಡು ಇಂಕ್ರಿಮೆಂಟುಗಳನ್ನು ಕೊಡಲಾಗುತ್ತಿತ್ತೆಂದು ಹೇಳೋಣವಾಯಿತು. ಆ ವಿಚಾರ ಸರ್ಕಾರದವರು ನಡೆಸುತ್ತಿದ್ದ ಪ್ರಾಥಮಿಕ ಶಾಲೆಗಳಿಗೆ ಮಾತ್ರ ಅನ್ವಯಿಸುತ್ತದೆಯೋ ಅಥವಾ ಬೋರ್ಡ್‌ಗಳವರು ನಡೆಸುತ್ತಿದ್ದ ಪ್ರಾಥಮಿಕ ಶಾಲೆಗಳಿಗೂ ಬರುತ್ತದೆಯೇ ?

ಶ್ರೀ ಎಸ್. ಆರ್. ಕಂಠಿ.—ಎರಡಕ್ಕೂ ಅನ್ವಯಿಸುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—1956ಕ್ಕೆ ಹಿಂದೆ ತಮ್ಮ ಸ್ವಂತ ಖರ್ಚಿನಲ್ಲಿ ಟ್ರೈನಿಂಗ್ ಮಾಡಿಕೊಂಡು ಪ್ರಾಥಮಿಕ ಶಾಲಾ ಉಪಾಧ್ಯಾಯರಾಗಿ ಬಂದವರಿಗೆ ಎರಡು ಅಡ್ವಾನ್ಸ್ ಇಂಕ್ರಿಮೆಂಟುಗಳನ್ನು ಕೊಡಬೇಕೆಂದು ಸರ್ಕಾರಿ ಆಜ್ಞೆಯಾಗಿತ್ತು. 1957ರಲ್ಲಿ ಈ ಆಜ್ಞೆ ರದ್ದಾಗಿದೆ. ಆದರೆ 1956ರಲ್ಲೇ ಟ್ರೈನಿಂಗ್ ಮಾಡಿಕೊಂಡಿದ್ದ ಉಪಾಧ್ಯಾಯರಿಗೆ ಈ ಎರಡು ಇಂಕ್ರಿಮೆಂಟುಗಳ ಬೆನಿಫಿಟ್ ಸಿಕ್ಕಿಲ್ಲ ಇಲ್ಲಿಯವರೆಗೂ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಆ ಅನುಕೂಲ ಅವರಿಗೆ ಆಟೋಮ್ಯಾಟಿಕ್ ಆಗಿ ಸಿಕ್ಕಿರಲೇಬೇಕು. ಹಾಗೊಂದ ವೇಳೆ ಸಿಕ್ಕದೆ ಇದ್ದ ನಿದರ್ಶನಗಳನ್ನು ನನ್ನ ಗಮನಕ್ಕೆ ತಂದರೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್. ಶಿವಪ್ಪ.—ಈ ಟ್ರೈನಿಂಗನ್ನು ಕೆಲವರು ತಮ್ಮ ಸ್ವಂತ ಖರ್ಚಿನಲ್ಲಿ ಮಾಡಿಕೊಂಡಿದ್ದಾರೆ. ಮತ್ತೆ ಕೆಲವರು ಸರ್ಕಾರದ ವೆಚ್ಚದಲ್ಲಿ ಮಾಡಿಕೊಂಡಿದ್ದಾರೆ. ಆದರೆ ಈ ಟ್ರೈನಿಂಗ್ ಪಡೆಯಲು ಒಬ್ಬ ಉಪಾಧ್ಯಾಯರಿಗೆ ಎಷ್ಟು ಖರ್ಚು ತಗಲುತ್ತದೆ ?

ಶ್ರೀ ಎಸ್. ಆರ್. ಕಂಠಿ.—ಇವಕ್ಕೆ ಪ್ರತ್ಯೇಕ ಪ್ರಶ್ನೆ ಕಳುಹಿಸಿದರೆ ಉತ್ತರ ಒದಗಿಸಲಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಒಬ್ಬರನ್ನು ಟ್ರೈನಿಂಗಿಗೆ ಕಳುಹಿಸಿದರೆಷ್ಟು ಖರ್ಚಾಗುತ್ತದೆಂಬುದು ಗೊತ್ತಾಗುವುದಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಟ್ರೈನಿಂಗ್ ಪಡೆಯೆತಕ್ಕ ಉಪಾಧ್ಯಾಯರಿಗೆ ನಾವು ಆಗ 50 ರೂಪಾಯಿ ಸಂಬಳ ಕೊಡುತ್ತಿದ್ದೆವು.

Mr. SPEAKER.—I will hold over question No. 548 as the Minister has written to me that he is not able to be present.

Construction of a New Type Middle School at Gowribidanur Town.

*Q.—628. Sri R. N. LAKSHMIPATHI (Gowribidanur).—

Will the Government be pleased to state :—

(*a*) when the Municipal Council, Gowribidanur, deposited Rs. 9,600 as its quota for construction of a New Type Middle School (Upper Primary School) at Gowribidanur Town ;

(*b*) the stage at which the matter is pending at present ?

A.—Sri S. R. KANTHI (Minister for Education).—

(*a*) The Municipal Council has deposited on 30-3-1961.

(*b*) The contribution from the Municipality cannot be accepted as they have to repay loans of about one lakh to the Government.

ಶ್ರೀ ಆರ್. ಎಚ್. ಲಕ್ಷ್ಮೀಪತಿ.—ಅಲ್ಲಿ ಈ ಎರಡು ಶಾಲೆಗಳಿಗೆ ಸ್ಥಳಾವಕಾಶವಿಲ್ಲದೆ ಈ ಎರಡು ಶಾಲೆಗಳೂ ಷಿಫ್ಟ್ ಸಿಸ್ಟಂಪ್ರಕಾರ ಇಲ್ಲಿಗೆ 10-12 ವರ್ಷಗಳಿಂದ ಕೆಲಸ ಮಾಡುತ್ತಿವೆ ಎಂಬ ಅಂತ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

†ಶ್ರೀ ಎಸ್. ಆರ್. ಕಂಠಿ.—ಬಂದಿದೆ.

ಶ್ರೀ ಆರ್. ಎಚ್. ಲಕ್ಷ್ಮೀಪತಿ.—ಈ 9600 ರೂಪಾಯಿಗಳನ್ನು ಡೆಪಾಜಿಟ್ ಮಾಡಲು ಆದೇಶ ಕೊಟ್ಟವರು ಯಾರು ?

ಶ್ರೀ ಎಸ್. ಆರ್. ಕಂಠಿ.—ಮುನಿಸಿಪಾಲಿಟಿಯವರು 9,600 ರೂಪಾಯಿಗಳನ್ನು ಮತ್ತು ಗ್ರಾಮಸ್ಥರು 4,000 ರೂಪಾಯಿಗಳ ಕಾಂಟ್ರಿಬ್ಯೂಷನ್ನನ್ನು ಕಟ್ಟಡದಬಿಗ್ಗೆ ಕೊಡಬೇಕೆಂದು ಸರ್ಕಾರದವರೇ ಆದೇಶ ಮಾಡಿದ್ದರು. ಆದರೆ ಇತ್ತೀಚೆಗೆ ನದಿ ಮುನಿಸಿಪಾಲಿಟಿಯವರು ಸರ್ಕಾರಕ್ಕೆ ಒಂದು ಲಕ್ಷದ ಮೇಲ್ಪಟ್ಟ ಹಣಕ್ಕೆ ಬಾಕಿದಾರರಾಗಿದ್ದಾರೆಂತ ತಿಳಿಯಬಂತು. ಆದ್ದರಿಂದ ಆ ವಿಚಾರವನ್ನು ಅಲ್ಲಿಗೆ ನಿಲ್ಲಿಸಲಾಯಿತು.

ಶ್ರೀ ಆರ್. ಎಚ್. ಲಕ್ಷ್ಮೀಪತಿ.—ಈಗಾಗಲೇ ಆ ಮುನಿಸಿಪಾಲಿಟಿಯವರು ಒಂದು ಲಕ್ಷ ರೂಪಾಯಿಗಳ ಸಾಲ ತೀರಿಸಿದ್ದಾರೆಂಬ ವಿಚಾರ ಸರ್ಕಾರದವರಿಗೆ ಗೊತ್ತಿಲ್ಲವೇ ?

Mr. SPEAKER.—The Minister says that they are still to pay.

Sri R. N. LAKSHMIPATHI.—Sir, the Municipality had taken 2 lakhs and odd. Now, they have repaid one lakh and odd. It is the Government that gave direction to the Municipality to credit Rs. 9,600 towards building and at the instance of the Government they have credited the sum.

Sri S. R. KANTHI.—Sir, collection is one thing and the Municipality paying is another. This amount is being paid by the Municipality. The objection is that the Municipality cannot pay this when it is still to pay one lakh of rupees to Government.

ಶ್ರೀ ಕೆ. ಎಚ್. ರಂಗನಾಥ್.—1961-62 ನೇ ಸಾಲಿನಲ್ಲಿ ಸಂಸ್ಥಾನದಲ್ಲಿರತಕ್ಕ ಬೇರಾವ ಮುನಿಸಿಪಾಲಿಟಿಗಳಿಗೂ ಸಾಲ-ಗ್ರಾಂಟ್ ಪಗೈರೆಗಳನ್ನು ಮಂಜೂರ್ ಮಾಡಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಆ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.

ಶ್ರೀ ಇ. ನಾರಾಯಣಗೌಡ.—ಈಗ ತಾವು ಈ ಗ್ರಾಂಟನ್ನು ಎಜ್ಯುಕೇಷನ್ ಇಲಾಖೆಯಿಂದ ಕೊಡುತ್ತಿದ್ದೀರೋ ಅಥವಾ L.S.G ಬಾಬಿನಿಂದ ಕೊಡುತ್ತಿದ್ದೀರೋ ?

ಶ್ರೀ ಎಸ್. ಆರ್. ಕಂಠಿ.—ಎಜ್ಯುಕೇಷನ್ ಇಲಾಖೆಯಿಂದಲೇ ಕೊಟ್ಟರೂ L.S.G. ಅವರನ್ನು ಕೇಳೇ ಕೊಡಬೇಕಾಗುತ್ತದೆ. ಆದ್ದರಿಂದ ಅವರನ್ನು ಕೇಳಿದ್ದಾರೆಂತ ಕಾಣುತ್ತಿದೆ. ಆದರೆ ಈಗ Financial ಇಲಾಖೆಯವರೂ ಮತ್ತು L.S.G. ಅವರು ಆಗುವುದಿಲ್ಲ ಅಂತ ಹೇಳುತ್ತಾರೆ

ಶ್ರೀ ಎಸ್. ಎಂ. ಕೃಷ್ಣ.—ಈಗ ಅವರು ಕೊಟ್ಟಿರತಕ್ಕ 9,600 ರೂಪಾಯಿಗಳನ್ನು ಆ L.S.G. ಬಾಬಿನ ಸಾಲಕ್ಕೆ ಉತ್ತರ ಮಾಡಿಕೊಳ್ಳಬೇಕೆಂದಿದ್ದೀರಾ ?

ಶ್ರೀ ಎಸ್. ಆರ್. ಕಂಠಿ.—ಹಾಗೆ ಆಗುವುದಿಲ್ಲ. ಯಾರು ಆ ಹಣವನ್ನು ಡೆಪಾಜಿಟ್ ಮಾಡಿದ್ದಾರೋ ಅವರಿಗೆ ಅದನ್ನು ವಾಪಸ್ಸು ತೆಗೆದುಕೊಳ್ಳಬಹುದೆಂದು ತಿಳಿಸಿದ್ದೇನೆ.

ಶ್ರೀ ಜಿ. ರಾಮೇಗೌಡ.—1961-62ನೇ ಸಾಲಲ್ಲಿ ಸಾಲ ಪಡೆದು, ಆ ಸಾಲದ ಬಾಕಿ ಇಟ್ಟುಕೊಂಡಿರತಕ್ಕ ಮುನಿಸಿಪಾಲಿಟಿಗಳಿಗಾಗಲಿ ಪುದಕ್ಕೂ ಸರ್ಕಾರದವರು ಗ್ರಾಂಟನ್ನು ಕೊಟ್ಟಿಲ್ಲವೋ ?

ಶ್ರೀ ಎಸ್. ಆರ್. ಕಂಠಿ.—ಆ ಪ್ರಶ್ನೆ ಈಗ ಇಲ್ಲಿ ಬರುವುದಿಲ್ಲ ಈಗ ಈ ಶಾಲೆಯನ್ನು ಸರ್ಕಾರದವರೇ ನಡೆಸುತ್ತಿದ್ದಾರೆ. ಈ ಬಗ್ಗೆ ಊರಿನವರಿಂದ ಕಾಂಟ್ರಿಬ್ಯೂಷನ್ ಬರಬೇಕಾಗಿದೆ. ಆದರೆ L.S.G. ಅವರೂ ಮತ್ತು F.D. ಅವರು ಬೇರೆ ಒಂದು ರೀತಿಯಲ್ಲಿ ಹೇಳುತ್ತಿದ್ದಾರೆ.

ಶ್ರೀ ಇ. ನಾರಾಯಣಗೌಡ.—ಸ್ಥಳೀಯ ಜನ ಕಾಂಟ್ರಿಬ್ಯೂಷನ್ ಕೊಟ್ಟರೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಇದರಬಗ್ಗೆ ಇರತಕ್ಕ ರೂಲ್ಸುಗಳೆಲ್ಲ ತಮಗೇ ಗೊತ್ತಿದೆ.

ಶ್ರೀ ನಿ. ಜೆ. ಮುಕ್ಕಣ್ಣಪ್ಪ.—ಈ ರೀತಿ ನಮಗೆ ಕಟ್ಟಡ ಆಗಲೇ ತಂದು ಧನಸಹಾಯಕ್ಕೆ ಅವರು ಅರ್ಜಿಹಾಕಿಕೊಂಡರೆ ಅದೇನು ನೇರವಾಗಿ ಎಜ್ಯುಕೇಷನ್ ಇಲಾಖೆಗೆ ಬರುತ್ತದೊ ಅಥವಾ ಡಿ. ಸಿ. ಮೂಲಕ ಬರುತ್ತದೋ? ಅವರು ಯಾವಾಗ ಅರ್ಜಿಹಾಕಿಕೊಂಡಿದ್ದರು?

ಶ್ರೀ ಎಸ್. ಆರ್. ಕಂಠಿ.—ಮೊದಲು ಮುನಿಸಿಪಾಲಟಿಯವರು ಡೆಪಾಜಿಟ್ ಮಾಡಿದರು. ಆಗ ನಾವು L.S.G. ಡಿಪಾರ್ಟ್‌ಮೆಂಟಿನವರನ್ನು ಮತ್ತು F.D. ಅವರನ್ನೂ ಕೇಳಲೇಬೇಕು. ಆ ರೀತಿ ಕೇಳಿದೆವು.

ಶ್ರೀ ಬಿ. ಎರ್. ಗೌಡ.—ಈ ಕಟ್ಟಡಗಳ ಬಡಾವಣೆಯನ್ನು ಬಾಲಕರ ಸಂಖ್ಯೆ ಮೇಲೆ ನಿರ್ಧರಿಸುತ್ತಿರೋ ಅಥವಾ ಹೇಗೆ?

ಶ್ರೀ ಎಸ್. ಆರ್. ಕಂಠಿ.—ಷಿಫ್ಟ್ ಸಿಸ್ಟಂನಲ್ಲಿ ತೊಂದರೆ ಇದೆ. ಆದರೆ ಇದಕ್ಕೆಲ್ಲ ಬೇರೆ ನೇಮಾವಳಿಗಳಿವೆ. ಅದರ ಪ್ರಕಾರ ಬಡಾವಣೆ ಮಾಡಬೇಕಾಗುತ್ತದೆ.

ಶ್ರೀ ಜಿ. ರಾಮೇಗೌಡ.—ಮೈಸೂರು ಸಂಸ್ಥಾನದಲ್ಲಿ 2 ಲಕ್ಷ ರೂಪಾಯಿಗಳ ಸಾಲ ಪಡೆದಿರ ತಕ್ಕ ಮುನಿಸಿಪಾಲಟಿಗಳಿಗೆ ಸರ್ಕಾರದವರು ಈ ಶಾರಾ ಕಟ್ಟಡಗಳ ಬಗ್ಗೆ ಬಿಲ್ಡಿಂಗ್ ಗ್ರ್ಯಾಂಟನ್ನು ಯಾರಿಗೂ ಕೊಟ್ಟಿಲ್ಲವೇ?

ಶ್ರೀ ಎಸ್. ಆರ್. ಕಂಠಿ.—ಈ ಪ್ರಶ್ನೆಗಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ಜಿ. ಏ. ಗೌಡ.—ಈಗ ತಾವು ಈ ಹಣವನ್ನು ವಾಪಸ್ಸು ಕೊಡುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ವಾಪಸ್ಸು ತೆಗೆದುಕೊಳ್ಳಬಹುದೆಂದು ತಿಳಿಸಲಾಗಿದೆ.

ಶ್ರೀ ಆರ್. ಎಕ್. ಲಕ್ಷ್ಮೀಪತಿ.—ಅಲ್ಲಿ ಈಗ ಕಟ್ಟಡವಿಲ್ಲದೆ ಬಹಳ ತೊಂದರೆಯಾಗಿದೆ. ಆ ಮುನಿಸಿಪಾಲಟಿಯವರು ರೆಗ್ಯುಲರ್‌ಆಗಿ ಸಾಲ ತೀರಿಸುತ್ತಾ ಬಂದಿದ್ದಾರೆ. ಆದ್ದರಿಂದ ಜಾಗ್ರತೆ ಅಲ್ಲಿ ಈ ಕಟ್ಟಡ ಕಟ್ಟಿಸಲು ಏರ್ಪಾಡುಮಾಡುತ್ತೀರಾ?

ಶ್ರೀ ಎಸ್. ಆರ್. ಕಂಠಿ. —ದುಡ್ಡನ್ನು ಕೊಡತಕ್ಕ ವಿಚಾರದಲ್ಲಿ ಇಲ್ಲ ನಾನೀಗ ಏನು ಹೇಳುವುದಕ್ಕೆ ಆಗುವುದಿಲ್ಲ. ಆವರು ಪ್ರತ್ಯೇಕವಾಗಿ ನನ್ನ ಹತ್ತಿರ ಬಂದರೆ ಇದಕ್ಕೆ ಬೇರೆ ಉಪಾಯ ಹೇಳಿ ಕೊಡುತ್ತೇನೆ. ಆ ಉಪಾಯವನ್ನು ಇಲ್ಲಿ ಹೇಳಲು ಸಾಧ್ಯವಿಲ್ಲ.

Sri G. V. GOWDA.—Sir, what is that method?

Mr. SPEAKER.—That is not a supplementary.

ಶ್ರೀ ಎಸ್. ಶಿವಪ್ಪ.—ಈಗ ಗೌರೀಬಿದನೂರು ಮುನಿಸಿಪಾಲಟಿಯವರು ಶಾರಾ ಕಟ್ಟಡದಬಗ್ಗೆ ವಿದ್ಯಾಖಾತೆಗೆ ಡೆಪಾಜಿಟ್ ಮಾಡಲಾಗಿದ್ದ 9,600 ರೂಪಾಯಿಗಳನ್ನು ಆ L.S.G. ಬ್ರಾಂಚಿನವರು ಅವರಿಗೆ ವಾಪಸ್ಸು ಕೊಡುವಂತೆ ವಿದ್ಯಾಖಾತೆಯವರು ನೋಟೀಸ್ ಜಾರಿಮಾಡಿ ಆ ಹಣವನ್ನು ಅವರಿಗೆ ವಾಪಸ್ಸು ಕೊಡಿಸುವಂತೆ ಪ್ರಯತ್ನ ಮಾಡುತ್ತಾರೆಯೇ?

ಶ್ರೀ ಎಸ್. ಆರ್. ಕಂಠಿ.—ಇದಕ್ಕೆ ನಾನಾಗಲೇ ಉತ್ತರ ಹೇಳಿದ್ದೇನೆ. ಆ 9,600 ರೂಪಾಯಿಗಳನ್ನು ಅವರು ವಾಪಸ್ಸು ತೆಗೆದುಕೊಳ್ಳಬಹುದೆಂದು ತಿಳಿಸಿದ್ದೇನೆ.

Mr. SPEAKER.—Question time is over.

QUESTION FOR ANSWER ON THE DAY

(but not taken up)

Grant of Government Lands near and around Bhadra Reservoir for starting a University.

*Q.—619. Sri SANJEEVANATH AIKALA (Suratkal).—

Will the Government be pleased to state :—

(*a*) whether they have received an application from the Registrar of Academy of General Education, Manipal, Udipi, for grant of Government lands near and around Bhadra Reservoir to start a University there;